# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ವಿಜಯಪುರ ಗ್ರಾಮೀಣ ವಲಯ

ಸಂಖ್ಯೆ: ಶಾ.ಮ.ವಿ/ಸ್ವೀ.ಪ.ಅ/01/2020-21 ದಿನಾಂಕ: 03.12.2020

## -: ಜ್ಞಾಪನ :-

ಅತೀ ತುರ್ತು

**ವಿಷಯ : 2020-21ನೇ ಸಾಲಿನಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಪ್ರಯುಕ್ತ ಎಲ್ಲಾ ಪ್ರೌಢಶಾಲೆಗಳಲ್ಲಿ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸುವ ಕುರಿತು**

ಉಲ್ಲೇಖ : 1. ಮಾನ್ಯ ರಾಜ್ಯ ಚುನಾವಣಾಧಿಕಾರಿಗಳು, ಬೆಂಗಳೂರು ರವರ ವಿ.ಸಿ. ದಿನಾಂಕ: 30.11.2020
2. ಮಾನ್ಯ ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ ರವರ ಸುತ್ತೋಲೆ
ಸಂ: ಸಿಆಸುಇ/39/ಸ್ವೀಪ್/2020-21 ದಿನಾಂಕ : 01.12.2020

@@@@@

ಭಾರತ ಚುನಾವಣಾ ಆಯೋಗವು ನೂತನ ಹಾಗೂ ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ/ ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಎಲ್ಲಾ ಪ್ರೌಢ ಶಾಲೆಗಳಲ್ಲಿ **"ಮತದಾರ ಸಾಕ್ಷರತಾ ಸಂಘ"** [ELC]ಗಳನ್ನು ಹಾಗೂ ಪ್ರತೀಯೊಂದು ವಿಧಾನ ಸಭೆ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ **ಚುನಾವ್ ಪಾಠಶಾಲಾ** (ಸ್ಥಳೀಯ ಗ್ರಾಮಸ್ಥರಿಗಾಗಿ)ಗಳನ್ನು ಕಡ್ಡಾಯವಾಗಿ ಸ್ಥಾಪಿಸಿ, ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ. ಚುನಾವ್ ಪಾಠಶಾಲೆಯನ್ನು ಮತಗಟ್ಟೆ ಹಂತದ ಅಧಿಕಾರಿಗಳು [BLOs] ನಿರ್ವಹಿಸುತ್ತಾರೆ. ಇವೆರಡೂ ಕ್ಲಬ್‌ಗಳ ಕಾರ್ಯಚಟುವಟಿಕೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಿಳಿಸಿದೆ.

1. ಕಡ್ಡಾಯವಾಗಿ ಎಲ್ಲಾ ಸರಕಾರಿ, ಅನುದಾನಿತ & ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ **"ಮತದಾರ ಸಾಕ್ಷರತಾ ಸಂಘ"**ಗಳು ಅಸ್ತಿತ್ವದಲ್ಲಿದ್ದು, ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

2. ಜಿಲ್ಲಾದಳತ ಹಂತದ ಅಧಿಕಾರಿಗಳು/ ಪ್ರತಿನಿಧಿಗಳು ಶಾಲೆಗಳಿಗೆ ಭೇಟಿ ನೀಡಿದಾಗ, ಆಯಾ ಶಾಲೆಗಳ **"ಮತದಾರ ಸಾಕ್ಷರತಾ ಸಂಘ"** ಹಾಗೂ ಅದರ ಕಾರ್ಯಚಟುವಟಿಕೆಗಳ ವಿವರವನ್ನು ಸೂಕ್ತ ದಾಖಲೆಗಳೊಂದಿಗೆ ಹಾಜರು ಪಡಿಸುವುದು..

3. ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ/ ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಎಲ್ಲಾ ಪ್ರೌಢ ಶಾಲೆಗಳಲ್ಲಿ "ಮತದಾರ ಸಾಕ್ಷರತಾ ಸಂಘ"ಗಳ ಮೂಲಕ ನಿರಂತರವಾಗಿ ಸೃಜನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಅದರ ಬಗ್ಗೆ ವರದಿಗಳು ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ವಹಿಸುವುದು.

(2ನೇ ಪುಟದಲ್ಲಿ ಮುಂದುವರೆದಿದೆ

4. ಎಲ್ಲಾ ಬಿ.ಎಲ್.ಓ [BLOs] ರವರು ತಮ್ಮ ತಮ್ಮ ಮತಗಟ್ಟೆಗಳಲ್ಲಿ ಚುನಾವ್ ಪಾಠಶಾಲಾ [CP] ಸ್ಥಾಪಿಸಿ, ಕಡ್ಡಾಯವಾಗಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಆಯಾ ಸಿ.ಆರ್.ಪಿ ರವರ ಮೂಲಕ ಈ ಕಚೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

5. ಚುನಾವಣೆ/ ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ಸಾಹಿತ್ಯ & ಇತರೆ ಕಾರ್ಯ ಚಟುವಟಿಕೆಗಳಿಗಾಗಿ https://ecisveep.nic.in ವೆಬ್‌ಸೈಟ್‌ಗೆ ಭೇಟಿ ನೀಡುವುದು.

6. 2020–21ನೇ ಸಾಲಿನಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಪ್ರಯುಕ್ತ ಕಡ್ಡಾಯವಾಗಿ ಪ್ರಬಂಧ (ಕನ್ನಡ/ಇಂಗ್ಲೀಷ್), ಪೋಸ್ಟರ್/ಕೋಲಾಜ್ ಮೇಕಿಂಗ್, ರಸಪ್ರಶ್ನೆ ಹೀಗೆ ಒಟ್ಟು 3 ಅಂಶಗಳಿಗೆ ಸಂಬಂಧಿಸಿದಂತೆ ಆನ್–ಲೈನ್ ಸ್ಪರ್ಧೆಗಳನ್ನು ಆಯೋಜಿಸಬೇಕು. ಪ್ರತೀಯೊಂದು ಇವೆಂಟ್‌ನಲ್ಲಿ ಪ್ರಥಮ & ದ್ವಿತೀಯ ಸ್ಥಾನ ವಿಜೇತ ಮಕ್ಕಳ ಪಟ್ಟಿಯನ್ನು ಸಂಬಂಧಿಸಿದ ಸಿ.ಆರ್.ಪಿ ರವರ ಮೂಲಕ **10.12.2020** ರೊಳಗಾಗಿ ಈ ಕಚೇರಿಗೆ ಕಡ್ಡಾಯವಾಗಿ ತಲುಪಿಸಬೇಕು. ಇದನ್ನು ಅತೀ ಜರೂರು ಎಂದು ಭಾವಿಸಿ ನಿಗದಿತ ದಿನಾಂಕದೊಳಗೆ ವಿಜೇತರ ಪಟ್ಟಿಯನ್ನು ಸಲ್ಲಿಸುವುದು.

## –: ಆನ್–ಲೈನ್ ಮೂಲಕ ಏರ್ಪಡಿಸಬೇಕಾದ ಸ್ಪರ್ಧೆಗಳ ವಿವರ :–

1. ಪ್ರಬಂಧ;

ಗರಿಷ್ಠ 750 ಪದಗಳಿಗೆ ಮೀರದಂತೆ ಕನ್ನಡ & ಆಂಗ್ಲ ಭಾಷೆಯಲ್ಲಿ ಬರೆಯುವುದು. ಎರಡೂ ಭಾಷೆಗಳ ಪ್ರಬಂಧವನ್ನು ಪ್ರತ್ಯೇಕವಾಗಿ ಬಹುಮಾನ ನೀಡಲುಪರಿಗಣಿಸಲಾಗುವುದು. ಪ್ರಬಂಧ ವಿಷಯಗಳು ಈ ಕೆಳಗಿಂತಿವೆ;

- ಮತದಾನದಲ್ಲಿ ಇ.ವಿ.ಎಂ & ವಿ.ವಿ.ಪ್ಯಾಟ್‌ಗಳ ಪ್ರಾಮುಖ್ಯತೆ
- ಶಿಕ್ಷಣ ವ್ಯವಸ್ಥೆಯಲ್ಲಿ ಮತದಾರರ ಶಿಕ್ಷಣ & ಭಾಗವಹಿಸುವಿಕೆ ಬಹಳ ಅವಶ್ಯಕ
- ಕೋವಿಡ್–19 ಸಾಂಕ್ರಾಮಿಕ ರೋಗವಿರುವುದರಿಂದ ಈ ಅವಧಿಯಲ್ಲಿ ಚುನಾವಣೆಯನ್ನು ಹೇಗೆ ನಡೆಸುವುದು?
- ಒಳಗೊಳ್ಳುವ ಚುನಾವಣೆಗಳು

2. ಭಿತ್ತಿಪತ್ರ/ ಕೋಲಾಜ್ ಮೇಕಿಂಗ್

22•28, ಸ್ಟಾಂಡರ್ಡ್ ಚಾರ್ಟ್ ಹಾಳೆಯಲ್ಲಿ ಭಿತ್ತಿಪತ್ರ/ ಕೋಲಾಜ್ ತಯಾರಿಸುವುದು.

- ಪ್ರಜಾಪ್ರಭುತ್ವ/ ಚುನಾವಣೆಗಳಲ್ಲಿ ಮತದಾರರ ಪಾತ್ರ
- ಚುನಾವಣೆಗಳಲ್ಲಿ ಮತದಾರರ ಕರ್ತವ್ಯಗಳು & ಜವಾಬ್ದಾರಿಗಳು
- ಕೋವಿಡ್–19 ಪ್ರಯುಕ್ತ ಚುನಾವಣೆಗಳಲ್ಲಿ ಯಾವ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು.
- ಸುಗಮ ಚುನಾವಣೆಗಳು
- [illegible]

3. ರಸಪ್ರಶ್ನೆ (ಕ್ವಿಜ್)

ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ನೋಂದಣಿ, ಅರ್ಹತೆ, ಹಕ್ಕು & ಕರ್ತವ್ಯಗಳು, ಮತಗಟ್ಟೆಗಳು, ಸಮಗ್ರ ಚುನಾವಣೆ & ಮತದಾನ ಪ್ರಕ್ರಿಯೆ ಇತ್ಯಾದಿ. ಇಬ್ಬರು ವಿದ್ಯಾರ್ಥಿಗಳನ್ನೊಳಗೊಂಡಂತೆ ತಂಡಗಳಲ್ಲಿ ರಸಪ್ರಶ್ನೆ ಹಮ್ಮಿಕೊಳ್ಳುವುದು.

ಈ ಮೇಲೆ ತಿಳಿಸಲಾದ ಎಲ್ಲಾ ಸ್ಪರ್ಧೆಗಳನ್ನು ಪ್ರಥಮಾದ್ಯತೆ ಮೇರೆಗೆ ಹಮ್ಮಿಕೊಂಡು ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ & ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ಅನುಬಂಧ –1 ರಲ್ಲಿ ಮಾಹಿತಿ ಭರ್ತಿ ಮಾಡಿ ದಿನಾಂಕ: 10.12.2020 ರೊಳಗಾಗಿ ಈ ಕಚೇರಿಗೆ ಸಲ್ಲಿಸಲು ತಿಳಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಗ್ರಾಮೀಣ ವಲಯ, ವಿಜಯಪುರ

ಗೆ,

ನಮ್ಮ ವಲಯದ ಎಲ್ಲಾ ಸಿ.ಆರ್.ಪಿ/ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು/ ಬಿ.ಎಲ್.ಒ ರವರ ಸೂಕ್ತ ಕ್ರಮಕ್ಕಾಗಿ

ಪ್ರತಿಗಳನ್ನು

1. ಮಾನ್ಯ ಜಿಲ್ಲಾಧಿಕಾರಿಗಳು &ಜಿಲ್ಲಾ ಚುನಾವಣಾಧಿಕಾರಿಗಳು ವಿಜಯಪುರ ರವರ ಕೃಪಾವಗಾಹನೆಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ವಿಜಯಪುರ ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
3. ಮಾನ್ಯ ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ ವಿಜಯಪುರ ರವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
4. ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಡಯಟ್ ವಿಜಯಪುರ ರವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ನಮೂನೆ - 1

# ರಾಷ್ಟ್ರೀಯ ಮತದಾರರ ದಿನಾಚರಣೆ : 25ನೇ ಜನವರಿ 2021

-: ಪ್ರೌಢಶಾಲಾ ಮಟ್ಟದ ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ವಿಜೇತರಾದ ಮಕ್ಕಳ ಪಟ್ಟಿ :-

ಶಾಲೆಯ ಹೆಸರು :

ಮುಖ್ಯೋಪಾಧ್ಯಾಯರ ಹೆಸರು & ಮೊಬೈಲ್ ಸಂಖ್ಯೆ :

## ಪ್ರಬಂಧ ವಿಭಾಗ

1.

2.

## ಭಿತ್ತಿ-ಪತ್ರ/ ಪೋಸ್ಟರ್ ಮೇಕಿಂಗ್ ವಿಭಾಗ

1.

2.

## ರಸಪ್ರಶ್ನೆ (ಕ್ವಿಜ್) ವಿಭಾಗ (ಒಬ್ಬ ವಿದ್ಯಾರ್ಥಿ ಮಾತ್ರ)

1.